ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಕಟ್ಟಡ ಮತ್ತು
ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029.
ಕಛೇರಿ: 080-29753350
karbuildworkerswelfare@gmail.com

ಸಂಖ್ಯೆ:ಸಿಡಬ್ಲ್ಯೂಬಿ/ಸೌಲಭ್ಯ/ಸಿಆರ್-01/2021-22 ದಿನಾಂಕ:01-10-2021

ಗೆ,

1) ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರುಗಳು
2) ಎಲ್ಲಾ ಕಾರ್ಮಿಕ ಅಧಿಕಾರಿಗಳು

ಮಾನ್ಯರೇ,

**ವಿಷಯ:** ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಾವಳಿಗಳು 2006ರ ನಿಯಮ 44 ಮತ್ತು 48 ರಡಿ ಸೌಲಭ್ಯ ವಿಸ್ತರಿಸಿರುವ ಕುರಿತು.

**ಉಲ್ಲೇಖ:** ಮಂಡಳಿಯ ಆದೇಶ ಸಂಖ್ಯೆ:ಕಕಾಮಂ/ಕೋವಿಡ್/ಸಿಆರ್-21/2021-22, ದಿನಾಂಕ:17-09-2021

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರು ಕೋವಿಡ್ ಬಾಧಿತರಾಗಿ ಚಿಕಿತ್ಸೆಯನ್ನು ಪಡೆದಿದ್ದಲ್ಲಿ, ನಿಯಮ 48ರಡಿಯಲ್ಲಿ ರೂ.2.00 ಲಕ್ಷಗಳವರೆಗಿನ ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ ನೀಡಲು ಮತ್ತು ನೋಂದಾಯಿತ ಫಲಾನುಭವಿ ಕೋವಿಡ್‌ನಿಂದ ಮೃತಪಟ್ಟಲ್ಲಿ ಅವರ ಅವಲಂಬಿತರಿಗೆ ನಿಯಮ 44ರಡಿಯಲ್ಲಿ ನೀಡಲಾಗುತ್ತಿರುವ ರೂ.54,000/-ಗಳ ಅಂತ್ಯ ಸಂಸ್ಕಾರ ಪರಿಹಾರದ ಬದಲಾಗಿ ರೂ.2,00,000/-ಗಳ ಅನುಗ್ರಹರಾಶಿ ಮತ್ತು ರೂ.4,000/-ಗಳ ಅಂತ್ಯಸಂಸ್ಕಾರ ವೆಚ್ಚ ನೀಡಲು ಉಲ್ಲೇಖಿತ ಆದೇಶದಲ್ಲಿ ತಿಳಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಮೇಲ್ಕಂಡ ಎರಡು ಸೌಲಭ್ಯಗಳನ್ನು ಆಯಾ ನಿಯಮಗಳಡಿ ನಿಗಧಿಪಡಿಸಿರುವ ಅರ್ಜಿ ನಮೂನೆಯಲ್ಲಿ ಮಾಹಿತಿಯನ್ನು ಆನ್‌ಲೈನ್ ಮೂಲಕ ಸಲ್ಲಿಸಿ ಸೌಲಭ್ಯಗಳನ್ನು ಪಡೆದುಕೊಳ್ಳಲು ಅವಕಾಶವಿರುತ್ತದೆ. ಅಲ್ಲದೇ, ಈಗಾಗಲೇ ಸದರಿ ನಿಯಮಗಳಲ್ಲಿ ಸೌಲಭ್ಯಗಳನ್ನು ಮಂಜೂರು ಮಾಡುತ್ತಿರುವ ಮಂಜೂರಾತಿ ಅಧಿಕಾರಿಗಳು (ನಿಯಮ 44 ಅಂತ್ಯಸಂಸ್ಕಾರ ವೆಚ್ಚ ಹಾಗೂ ಅನುಗ್ರಹರಾಶಿ ಸೌಲಭ್ಯ-ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ನಿಯಮ 48 ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ-ಕಾರ್ಮಿಕ ಅಧಿಕಾರಿಗಳು) ಈ ಮೇಲಿನ ಸೌಲಭ್ಯಗಳನ್ನು ಸಹ ಮಂಜೂರು ಮಾಡುವಂತೆ ಈ ಮೂಲಕ ತಿಳಿಸಿದೆ.

ಮುಂದುವರೆದು, ಕೋವಿಡ್-19 ನಿಂದ ಮೃತಪಟ್ಟ ಫಲಾನುಭವಿಯ ಅವಲಂಬಿತರು ಪರಿಹಾರ ಪಡೆಯಲು ನಿಯಮ-44 ರಲ್ಲಿ ಅರ್ಜಿಯನ್ನು ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸಿದ ನಂತರ ಈ ಪತ್ರದೊಂದಿಗೆ ಲಗತ್ತಿಸಿರುವ ಅರ್ಜಿ ನಮೂನೆಯಲ್ಲಿ ಅರ್ಜಿದಾರರಿಂದ ಭರ್ತಿಮಾಡಿಸಿ, ಅದರೊಂದಿಗೆ ಲಗತ್ತಿಸಿರುವ ದಾಖಲೆಗಳನ್ನು ಪಡೆದು, ಪರಿಶೀಲಿಸಿ ನಿಯಮಾನುಸಾರ ಅರ್ಜಿ ವಿಲೇವಾರಿಗೆ ಕ್ರಮಕೈಗೊಳ್ಳತಕ್ಕದ್ದು ಮತ್ತು ಈ ಬಗ್ಗೆ ತಮ್ಮ ಅಧೀನ ಕಛೇರಿಗಳಿಗೆ ಮಾಹಿತಿ ನೀಡುವುದು.

ತಮ್ಮ ನಂಬುಗೆಯ

(ಅಕ್ರಂ ಪಾಷ ಭಾ.ಆ.ಸೇ.)
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಕಾರ್ಯದರ್ಶಿಗಳು
ಕ.ಕ.&ಇ.ನಿ.ಕಾ.ಕ.ಮಂಡಳಿ

ಪ್ರತಿಯನ್ನು:

1. ಎಲ್ಲಾ ಉಪ ಕಾರ್ಮಿಕ ಆಯುಕ್ತರುಗಳ ಮಾಹಿತಿಗಾಗಿ.
2. ಎಲ್ಲಾ ಹಿರಿಯ/ಕಾರ್ಮಿಕ ನಿರೀಕ್ಷಕರುಗಳ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.

ಕರ್ನಾಟಕ ಸರ್ಕಾರ

ಕಾರ್ಮಿಕ ಇಲಾಖೆ

## ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು ರವರ ನಡವಳಿಗಳು

| | |
|---|---|
| ವಿಷಯ: | ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಾವಳಿಗಳು 2006ರ ನಿಯಮ 44 ಮತ್ತು 48 ರಡಿ ಆದೇಶ ಹೊರಡಿಸುವ ಕುರಿತು. |
| ಉಲ್ಲೇಖ: | 1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಕಾಇ 207 ಎಲ್ಇಟಿ 2021, ದಿನಾಂಕ: 16-09-2021.<br>2. ಸಂಸದೀಯ ವ್ಯವಹಾರಗಳು ಮತ್ತು ಶಾಸನ ಇಲಾಖೆಯ ಟಿಪ್ಪಣಿ ಸಂಖ್ಯೆ: ಸಂವ್ಯಶಾಇ 224 ಅಶಾರ 2021, ದಿನಾಂಕ: 07-09-2021 |

******

**ಪೀಠಿಕೆ:**

ದೇಶದಾದ್ಯಂತ ಕೋವಿಡ್-19ರ ಸಾಂಕ್ರಾಮಿಕ ರೋಗವು ಹರಡಿದ್ದು ಇದರಿಂದ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಹಿತ ಹಲವರು ಬಾದಿತರಾಗಿರುತ್ತಾರೆ. ಈ ರೋಗದಿಂದ ಭಾದಿತರಾದವರು ಚಿಕಿತ್ಸೆಗಾಗಿ ಅಪಾರ ಪ್ರಮಾಣದ ಮೊತ್ತವನ್ನು ವೆಚ್ಚ ಮಾಡಿರುತ್ತಾರೆ. ಇದಲ್ಲದೇ, ಈ ಸಾಂಕ್ರಾಮಿಕ ರೋಗದಿಂದ ಬಾದಿತರು ಮೃತಪಟ್ಟಲ್ಲಿ ಅವರ ಅವಲಂಬಿತರು ಹಾಗೂ ಕುಟುಂಬದ ಸದಸ್ಯರು ಸಂಕಷ್ಟಕ್ಕೆ ಒಳಗಾಗಿರುತ್ತಾರೆ. ಈ ಹಿನ್ನಲೆಯಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಸೂಕ್ತ ನೆರವು ಮತ್ತು ಸಹಾಯವನ್ನು ದೊರಕಿಸುವುದು ಅವಶ್ಯಕವೆಂದು ಮಂಡಳಿಯು ಪರಿಗಣಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಉಲ್ಲೇಖ- 1 ಮತ್ತು 2ರನ್ವಯ ಕೋವಿಡ್-19 ಕಾಯಿಲೆಯನ್ನು Major ailments ಅಡಿಯಲ್ಲಿ ಸೇರಿಸಲು ಮಂಡಳಿಯು ಅಧಿಸೂಚನೆಯನ್ನು ಹೊರಡಿಸುವ ಅಧಿಕಾರ ಹೊಂದಿರುವುದಾಗಿ ಸರ್ಕಾರ ಸೂಚಿಸಿದೆ. ಈ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

**<u>ಮಂಡಳಿಯ ಆದೇಶ ಸಂಖ್ಯೆ: ಕಕಾಮಂ/ಕೋವಿಡ್/ಸಿಆರ್-21/2021-22, ಬೆಂಗಳೂರು</u>**

**<u>ದಿನಾಂಕ:17-09-2021</u>**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಗಳು, 2006 ರನ್ವಯ ಈಗಾಗಲೇ ನಿಯಮ 48ರಲ್ಲಿ ಕಟ್ಟಡ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಪ್ರಮುಖ ಕಾಯಿಲೆಗಳಿಗೆ ಚಿಕಿತ್ಸೆ ಪಡೆದಾಗ ರೂ.2.00 ಲಕ್ಷದ ವರೆಗೆ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಅವಕಾಶವಿದ್ದು, ನಿಯಮ 48(1) ರಲ್ಲಿ ಕೋವಿಡ್-19 ಖಾಯಿಲೆಯನ್ನು ಸಹ ಸೇರಿಸಿ ಆದೇಶಿಸಲಾಗಿದ್ದು ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಹಾಗೂ ಅವರ ಅವಲಂಬಿತರು ಕೋವಿಡ್-19 ಬಾದಿತರಾಗಿ ಚಿಕಿತ್ಸೆಯನ್ನು ಪಡೆದಿದ್ದಲ್ಲಿ ನಿಯಮ 48 ರಲ್ಲಿ ನಿಗಧಿಪಡಿಸಿರುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ರೂ.2,00,000/- ಗಳಿಗೆ ಮೀರದಂತೆ ಅವರ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಆದೇಶಿಸಿದೆ.

ಅದೇ ರೀತಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಗಳು 2006 ರ ನಿಯಮ 44ರಡಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮೃತಪಟ್ಟಲ್ಲಿ ಅವರ ನಾಮ ನಿರ್ದೇಶಿತರು ರೂ.54,000/- ಗಳವರೆಗೆ ಅನುಗ್ರಹರಾಶಿ ಮತ್ತು ಅಂತ್ಯಸಂಸ್ಕಾರ ವೆಚ್ಚವನ್ನು ಪಡೆಯಲು ಅರ್ಹರಿದ್ದು, ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕೋವಿಡ್-19 ಕಾಯಿಲೆಯಿಂದ ಬಾಧಿತರಾಗಿ ಮರಣ ಹೊಂದಿದ್ದಲ್ಲಿ ಕಾರ್ಮಿಕರ ಅವಲಂಬಿತರಿಗೆ ವಿಶೇಷ ಪ್ರಕರಣಗಳೆಂದು ಪರಿಗಣಿಸಿ ರೂ.50,000/- ಗಳ ಅನುಗ್ರಹರಾಶಿಗೆ ಬದಲಾಗಿ ಒಟ್ಟು ರೂ.2,00,000/- ಗಳ ಅನುಗ್ರಹರಾಶಿಯನ್ನು ಪಡೆಯಲು ಅರ್ಹರಿರುತ್ತಾರೆ ಹಾಗೂ ಅಂತ್ಯ ಸಂಸ್ಕಾರ ವೆಚ್ಚ ರೂ.4,000/- ಗಳನ್ನು ಪಡೆಯಲು ಅರ್ಹರಿರುತ್ತಾರೆಂದು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:01-04-2021 ರಿಂದ ಅನ್ವಯವಾಗುವಂತೆ ಹೊರಡಿಸಿದೆ.

17/9

(ಅಕ್ರಂ ಪಾಷ., ಭಾ.ಆ.ಸೇ.)
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಕಾರ್ಯದರ್ಶಿಗಳು
ಕ.ಕ&ಇ.ನಿ.ಕಾ.ಕ. ಮಂಡಳಿ.

**ಸ್ಥಳ:** ಬೆಂಗಳೂರು
**ದಿನಾಂಕ:** 17-09-2021

**ಗೆ,**

1. ಎಲ್ಲಾ ಉಪ ಕಾರ್ಮಿಕ ಆಯುಕ್ತರು/ಸಹಾಯಕ ಕಾರ್ಮಿಕ ಆಯುಕ್ತರು/ಕಾರ್ಮಿಕ ಅಧಿಕಾರಿಗಳು.
2. ಎಲ್ಲಾ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು – ಕಾರ್ಮಿಕ ಅಧಿಕಾರಿಗಳ ಮೂಲಕ.

**ಪ್ರತಿಯನ್ನು:-**

1. ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ರವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ – ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ರವರ ಆದ್ಯ ಗಮನಕ್ಕೆ ತರಲು ಕೋರಲಾಗಿದೆ.
2. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಬೆಂಗಳೂರು- ಇವರ ಆಪ್ತ ಕಾರ್ಯದರ್ಶಿಗಳ ಮೂಲಕ ಮಾಹಿತಿಗಾಗಿ.
3. ಮಾನ್ಯ ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬೆಂಗಳೂರು- ಇವರ ಆಪ್ತ ಕಾರ್ಯದರ್ಶಿಗಳ ಮೂಲಕ ಮಾಹಿತಿಗಾಗಿ.

## ಮಂಡಳಿಯ ನೋಂದಾಯಿತ ಫಲಾನುಭವಿ ಕೋವಿಡ್-19 ವೈರಾಣು ಸೋಂಕಿನಿಂದಾಗಿ ಮೃತಪಟ್ಟ ಸಂದರ್ಭದಲ್ಲಿ ಪರಿಹಾರ ಪಡೆಯಲು ಸಲ್ಲಿಸಬೇಕಾದ ಅರ್ಜಿ ನಮೂನೆ

| | | |
|---|---|---|
| 1 | ಕೋವಿಡ್‌ನಿಂದ ಮೃತಪಟ್ಟವರ ಹೆಸರು | |
| 2 | ವಿಳಾಸ | |
| 3 | ಮೃತ ಪಟ್ಟವರ ಆಧಾರ್ ಸಂಖ್ಯೆ | |
| 4 | ಪಿ (ಪೇಷೆಂಟ್) ಸಂಖ್ಯೆ ಕೋವಿಡ್ ದೃಡಪಟ್ಟ ರೋಗಿ ಸಂಖ್ಯೆ | |
| 5 | ಕೋವಿಡ್ ದೃಡಪಟ್ಟ ದಿನಾಂಕ | |
| 6 | ಮೃತಪಟ್ಟ ದಿನಾಂಕ | |
| 7 | ಮೃತಪಟ್ಟವರ ಮರಣದ ಕಾರಣ | |
| 8 | ಜನ್ಮ ದಿನಾಂಕ / ವಯಸ್ಸು | |
| 9 | ಮಂಡಳಿಯಿಂದ ಪಡೆದಿರುವ ಗುರುತಿನ ಚೀಟಿಯ ಸಂಖ್ಯೆ ಮತ್ತು ದಿನಾಂಕ | |
| 10 | ಮರಣ ಪ್ರಮಾಣ ಪತ್ರ ಸಂಖ್ಯೆ ಮತ್ತು ದಿನಾಂಕ | |
| | **ಅರ್ಜಿದಾರರ ವಿವರ** | |
| 11 | ಅರ್ಜಿದಾರರ ಹೆಸರು | |
| 12 | ಅರ್ಜಿದಾರರ ವಿಳಾಸ | |
| 13 | ಮೊಬೈಲ್ ಸಂಖ್ಯೆ | |
| 14 | ಅರ್ಜಿದಾರರ ಆದಾರ್ ಸಂಖ್ಯೆ | |
| 15 | ಅರ್ಜಿದಾರರ ಪಡಿತರ ಚೀಟಿ ಸಂಖ್ಯೆ | |
| 16 | ಮೃತ ವ್ಯಕ್ತಿಯೊಡನೆ ಇರುವ ಸಂಬಂಧ | |
| 17 | ಬ್ಯಾಂಕ್ ಹೆಸರು, ಶಾಖೆ, ಖಾತೆ ಸಂಖ್ಯೆ ಮತ್ತು ಐಎಫ್‌ಎಸ್‌ಸಿ ಕೋಡ್ | |

## ಮೃತ ಪಟ್ಟ ವ್ಯಕ್ತಿಯ ಕುಟುಂಬ ಸದಸ್ಯರ ವಿವರ

| ಕ್ರ.ಸಂ | ಕುಟುಂಬ ಸದಸ್ಯರ ಹೆಸರುಗಳು | ಮೃತ ವ್ಯಕ್ತಿಯೊಡನೆ ಸಂಬಂಧ | ಜೀವಂತ / ಮರಣ | ವಯಸ್ಸು | ಆಧಾರ್ ಸಂಖ್ಯೆ |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |

1. ಮೇಲ್ಕಂಡಂತೆ ನೀಡಿರುವ ಎಲ್ಲಾ ಮಾಹಿತಿಗಳೂ ಸತ್ಯವಾಗಿರುತ್ತದೆ ಎಂದು ಪ್ರಮಾಣಿಕರಿಸುತ್ತೇನೆ. ಒಂದು ವೇಳೆ ಮೇಲ್ಕಂಡ ಅಂಶಗಳು ಸುಳ್ಳೆಂದು ಕಂಡು ಬಂದರೆ ನನ್ನ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಬಹುದು ಎಂಬುದಾಗಿ ನಾನು ಒಪ್ಪಿರುತ್ತೇನೆ.

**ಅರ್ಜಿದಾರರ ಸಹಿ**

**ದಿನಾಂಕ:**

**ಸ್ಥಳ:**

### ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು

1. ಮೃತ ಫಲಾನುಭವಿಯ ಮೂಲ ಗುರುತಿನ ಚೀಟಿ
2. ಮೃತ ಫಲಾನುಭವಿಯ ಆಧಾರ್ ಕಾರ್ಡ್ ಪ್ರತಿ
3. ಅರ್ಜಿದಾರರ ಪಡಿತರ ಚೀಟಿ (ಇದ್ದಲ್ಲಿ ಮಾತ್ರ)
4. ಅರ್ಜಿದಾರರ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ
5. ಮೃತ ಫಲಾನುಭವಿಯ ಮೂಲ / ದೃಢೀಕೃತ ಮರಣ ಪ್ರಮಾಣ ಪತ್ರ
6. ಕೋವಿಡ್-19 ಪಾಟಿಟಿವ್ ರಿಪೋರ್ಟ್ (ಅಧಿಕೃತವಾಗಿ ಗುರುತಿಸಿದ ಪ್ರಯೋಗಾಲಯದಿಂದ ಪಡೆದಿರುವ) ಅರ್ಹತೆ ಪಡೆದ ವೈದ್ಯರಿಂದ ದೃಢೀಕರಿಸಿ ಸಲ್ಲಿಸುವುದು ಅಥವಾ ರೋಗ ಲಕ್ಷಣಗಳ ಆಧಾರದ ಮೇಲೆ ಚಿಕಿತ್ಸೆ ಪಡೆದವರು (ಕೋವಿಡ್-19 ನೆಗೆಟಿವ್ ಇದ್ದವರು) ಕ್ಲಿನಿಕಲ್ ರೇಡಿಯೋಲಾಜಿ ಮತ್ತು ಇತರೆ ಸಂಬಂಧಿಸಿದ ಪ್ರಯೋಗಾಲಯದಿಂದ ಪಡೆದ ವರದಿ ಹಾಗೂ ಪಿ ನಂಬರ್ (ರೋಗಿ ಸಂಖ್ಯೆ) ದಾಖಲೆಯನ್ನು ಅರ್ಹತೆ ಪಡೆದ ವೈದ್ಯರಿಂದ ದೃಢೀಕರಿಸಿ ಸಲ್ಲಿಸುವುದು.
7. ಕೋವಿಡ್ ಕಾಯಿಲೆಗಾಗಿ ಚಿಕಿತ್ಸೆ ಪಡೆದಿದ್ದಲ್ಲಿ ವೈದ್ಯಕೀಯ ದಾಖಲೆಗಳ ಪ್ರತಿಗಳನ್ನು ಸಲ್ಲಿಸುವುದು.
8. ಅರ್ಜಿದಾರರಿಂದ ಪರಿಹಾರ ಪಡೆಯಲು ನೀಡುವ ಸ್ವಯಂ ಘೋಷಣಾ ಪತ್ರ
9. ಅರ್ಜಿದಾರರು ಪರಿಹಾರ ಪಡೆಯುವಲ್ಲಿ ಕುಟುಂಬದ ಎಲ್ಲಾ ಸದಸ್ಯರನ್ನೊಳಗೊಂಡಂತೆ ನೀಡುವ ನಿರಾಕ್ಷೇಪಣಾ ಪತ್ರ
10. ಈಗಾಗಲೇ ನಿಯಮ 44 ರಡಿಯಲ್ಲಿ ಅಂತ್ಯ ಸಂಸ್ಕಾರ ವೆಚ್ಚ ಹಾಗೂ ಅನುಗ್ರಹರಾಶಿ ಪರಿಹಾರ ಪಡೆಯಲು ಅರ್ಜಿ ಸಲ್ಲಿಸಿರುವ / ಸಲ್ಲಿಸದೇ ಇರುವ ಬಗ್ಗೆ ಘೋಷಣಾ ಪತ್ರ.

**ಮಂಡಳಿಯ ನೋಂದಾಯಿತ ಫಲಾನುಭವಿ ಕೋವಿಡ್-19 ನಿಂದಾಗಿ ಮೃತಪಟ್ಟಾಗ ಕುಟುಂಬಸ್ಥರು ಪರಿಹಾರ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ವಿವರಗಳು**

1. ಮೃತ ಫಲಾನುಭವಿಯ ಮೂಲ ಗುರುತಿನ ಚೀಟಿ
2. ಮೃತ ಫಲಾನುಭವಿಯ ಆಧಾರ್ ಕಾರ್ಡ್ ಪ್ರತಿ
3. ಅರ್ಜಿದಾರರ ಪಡಿತರ ಚೀಟಿ (ಇದ್ದಲ್ಲಿ ಮಾತ್ರ)
4. ಅರ್ಜಿದಾರರ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ
5. ಮೃತ ಫಲಾನುಭವಿಯ ಮೂಲ / ದೃಢೀಕೃತ ಮರಣ ಪ್ರಮಾಣ ಪತ್ರ
6. ಕೋವಿಡ್-19 ಪಾಟಿಟಿವ್ ರಿಪೋರ್ಟ್ (ಅಧಿಕೃತವಾಗಿ ಗುರುತಿಸಿದ ಪ್ರಯೋಗಾಲಯದಿಂದ ಪಡೆದಿರುವ) ಅರ್ಹತೆ ಪಡೆದ ವೈದ್ಯರಿಂದ ದೃಢೀಕರಿಸಿ ಸಲ್ಲಿಸುವುದು ಅಥವಾ ರೋಗ ಲಕ್ಷಣಗಳ ಆಧಾರದ ಮೇಲೆ ಚಿಕಿತ್ಸೆ ಪಡೆದವರು (ಕೋವಿಡ್-19 ನೆಗೆಟಿವ್ ಇದ್ದವರು) ಕ್ಲಿನಿಕಲ್ ರೇಡಿಯೋಲಾಜಿ ಮತ್ತು ಇತರೆ ಸಂಬಂಧಿಸಿದ ಪ್ರಯೋಗಾಲಯದಿಂದ ಪಡೆದ ವರದಿ ಹಾಗೂ ಪಿ ನಂಬರ್ (ರೋಗಿ ಸಂಖ್ಯೆ) ದಾಖಲೆಯನ್ನು ಅರ್ಹತೆ ಪಡೆದ ವೈದ್ಯರಿಂದ ದೃಢೀಕರಿಸಿ ಸಲ್ಲಿಸುವುದು.
7. ಕೋವಿಡ್ ಕಾಯಿಲೆಗಾಗಿ ಚಿಕಿತ್ಸೆ ಪಡೆದಿದ್ದಲ್ಲಿ ವೈದ್ಯಕೀಯ ದಾಖಲೆಗಳ ಪ್ರತಿಗಳನ್ನು ಸಲ್ಲಿಸುವುದು.
8. ಅರ್ಜಿದಾರರಿಂದ ಪರಿಹಾರ ಪಡೆಯಲು ನೀಡುವ ಸ್ವಯಂ ಘೋಷಣಾ ಪತ್ರ
9. ಅರ್ಜಿದಾರರು ಪರಿಹಾರ ಪಡೆಯುವಲ್ಲಿ ಕುಟುಂಬದ ಎಲ್ಲಾ ಸದಸ್ಯರನ್ನೊಳಗೊಂಡಂತೆ ನೀಡುವ ನಿರಾಕ್ಷೇಪಣಾ ಪತ್ರ
10. ಸಂಬಂಧಪಟ್ಟ ಕಾರ್ಯವ್ಯಾಪ್ತಿಯ ಹಿರಿಯ / ಕಾರ್ಮಿಕ ನಿರೀಕ್ಷಕರು ನಡೆಸಿದ ಪರಿಶೀಲನಾ ವರದಿ (ಅರ್ಜಿ ಸಲ್ಲಿಸಿದ ನಂತರ)
11. ಈಗಾಗಲೇ ನಿಯಮ 44 ರಡಿಯಲ್ಲಿ ಅಂತ್ಯ ಸಂಸ್ಕಾರ ವೆಚ್ಚ ಹಾಗೂ ಅನುಗ್ರಹರಾಶಿ ಪರಿಹಾರ ಪಡೆಯಲು ಅರ್ಜಿ ಸಲ್ಲಿಸಿರುವ / ಸಲ್ಲಿಸದೇ ಇರುವ ಬಗ್ಗೆ ಘೋಷಣಾ ಪತ್ರ.